ಆ) ಬಾಕಿ ಇರುವ 13 ಹುದ್ದೆಗಳನ್ನು ಪ್ರಕಟಿಸಲು ಕೆಲವು ಹುದ್ದೆಗಳ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ, ಇನ್ನು ಕೆಲವು ಹುದ್ದೆಗಳನ್ನು ಇತ್ತೀಚೆಗೆ ಗುರುತಿಸಿರುವುದರಿಂದ ಬಾಕಿ ಇದೆ.

ಇ) ಹೌದು.

ಈ) ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಸಂಬಂಧಿಸಿದ ಇಲಾಖೆಗಳಿಗೆ ಸೂಚನೆ ನೀಡಲಾಗಿದೆ.

2064 (1729) ಶ್ರೀ ಕ್ಯಾತ್ಸಂದ್ರ.ಎನ್.ರಾಜಣ್ಣ (ಬೆಳ್ಳಾವಿ) :- ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶುಚಿಕಿತ್ಸಾಲಯಗಳನ್ನು ಪಶುವೈದ್ಯ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹೌದಾದಲ್ಲಿ, ತುಮಕೂರು ಜಿಲ್ಲೆಯ ಎಲ್ಲಾ ಹೋಬಳಿ ಕೇಂದ್ರಗಳಲ್ಲಿರುವ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ ಹಾಗೂ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ;

ಇ) ಬೆಳ್ಳಾವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪಶುವೈದ್ಯಕೀಯ ಚಿಕಿತ್ಸಾಲಯಗಳ ವಿವರ ನೀಡುವುದು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶುಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಇಲಾಖೆಯಲ್ಲಿದೆ. ಇದನ್ನು ಅವಶ್ಯಕತೆಗೆ ಅನುಗುಣವಾಗಿ ಹಂತ ಹಂತವಾಗಿ ಮಾಡಲು ಉದ್ದೇಶಿಸಿದೆ. ಸರ್ಕಾರದ ಆದೇಶ ಸಂಖ್ಯೆ : ಪಸಂಮೀ 250 ಪಸಸೇ 2005, ಬೆಂಗಳೂರು, ದಿನಾಂಕ : 27-03-2007ರ ಮೇರೆಗೆ ರಾಜ್ಯದಲ್ಲಿನ 50 ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಿ ಆದೇಶ ಹೊರಡಿಸಲಾಗಿದೆ. ಅವುಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಹುಳಿಯಾಳ ಮತ್ತು ನೊಣವಿನಕೆರೆ ಪಶುಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಿದೆ.

ಆ) ಹೋಬಳಿ ಕೇಂದ್ರಗಳಲ್ಲಿರುವ ಎಲ್ಲಾ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲೇ ಬೇಕೆಂಬ ಯಾವುದೇ ಕಾರ್ಯಕ್ರಮ

ಇಲಾಖೆಯಲ್ಲಿ ಇಲ್ಲ. ಆದರೆ ಪಶುಚಿಕಿತ್ಸಾಲಯದ ವ್ಯಾಪ್ತಿಯಲ್ಲಿನ ಜಾನುವಾರುಗಳ ಸಾಂದ್ರತೆ, ಅತೀ ಹೆಚ್ಚಿನ ಉತ್ತಮ ಗುಣಮಟ್ಟದ ಉತ್ಪಾದಕ ತಳಿಗಳ ಸಾಂದ್ರತೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗುತ್ತಿದೆ. ಇದಕ್ಕೆ ಯಾವುದೇ ಕಾಲಮಿತಿ ನಿಗದಿಪಡಿಸಲಾಗಿಲ್ಲ.

ಇ) ಬೆಳ್ಳಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 8 ಪಶುಚಿಕಿತ್ಸಾಲಯಗಳು ಸೇರಿದಂತೆ 10 ಪಶುವೈದ್ಯ ಸಂಸ್ಥೆಗಳಿವೆ. ವಿವರ ಈ ಕೆಳಕಂಡಂತಿವೆ.

(1) ಪಶುಚಿಕಿತ್ಸಾಲಯಗಳು	08	ಬೆಳ್ಳಾವಿ, ಬೆಳಧರೆ, ತೋವಿನಕೆರೆ, ಬಡವನ ಹಳ್ಳಿ, ಕಾರ್ಪೇನಹಳ್ಳಿ, ಬೇಳೂರು, ಅಂಕಸಂದ್ರ, ಕೊಡಿಯಾಲ
(2) ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	09	ನೆಲಹಾಳ, ಹೆರೆಗುಂಡಕಲ್, ಕೋರ, ಕೆಸ್ತೂರು, ಮಲ್ಲೇಕಾವು, ಕವಣದಾಳ, ದಬ್ಬೇಘಟ್ಟ, ಕೈಮರ, ರಂಟವಳಲ್ಲು, ಬಿದರೆ.
(3) ಕೃತಕ ಗರ್ಭಧಾರಣಾ ಕೇಂದ್ರ	02	ಬುಕ ಭಟ್ಟ, ಸಜ್ಜಿಹೊಸಹಳ್ಳಿ.

2065 (2523) ಶ್ರೀ ಕೃಷ್ಣಮೂರ್ತಿ ಕೆ.ಎಂ (ಕಡೂರು) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1961–62ನೇ ಸಾಲಿನಿಂದ ಇರುವ ಅಲೆಮಾರಿ ಜನಾಂಗದ ಶೈಕ್ಷಣಿಕ ಯೋಜನೆಯನ್ನು ರದ್ದುಪಡಿಸಿದೆ. 2007–08ನೇ ಸಾಲಿನಿಂದ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ಮುಂದುವರಿಸಲಾಗುವುದೇ;

1) ಅಲೆಮಾರಿ ಜನಾಂಗದ ಆಶ್ರಮ ಶಾಲೆಗಳು 2225–03–277–1–04

2) ಹೊಲೆಗೆ ತರಬೇತಿ ಕೇಂದ್ರಗಳು 2225–03–102–2–04

3) ಹೆಚ್ಚುವರಿ ಭೋಜನಾ ವೆಚ್ಚ 2225–03–277–1–07

4) ಮೆಟ್ರಿಕ್ ಪೂರ್ವ/ನಂತರ ವಿದ್ಯಾರ್ಥಿ ವೇತನಗಳು 2225–03–277–0–7

5) ಮಹಿಳಾ ಕಲ್ಯಾಣ ಕೇಂದ್ರ ಸರ್ಕಾರದ ಆದೇಶ ಸಕಇ:331 ಬಿಎಂಎಸ್ 2003 ದಿನಾಂಕ : 080–02–2005 ರಂದು ರದ್ದುಮಾಡಲಾದ 32 ಕೇಂದ್ರಗಳ ಬದಲಿಗೆ